C.C.. No.499/2023 CW:4
PW:4

**1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಪುತ್ತೂರು , ದ.ಕ.**

**C.C..No. 499/2023**

| | |
|---|---|
| ಸಾಕ್ಷಿದಾರರ ಹೆಸರುಃ | ತಿಮ್ಮಯ್ಯ |
| ತಂದೆಯ ಹೆಸರುಃ | ಮಲ್ಲ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಅಟೋ ರಿಕ್ಷಾ ಚಾಲಕ ಹಾಗೂ ಕೂಲಿ ಕೆಲಸ |
| ವಾಸಸ್ಥಳಃ | ಮಾಡ್ನೂರು ಗ್ರಾಮ |

ದಿನಾಂಕ 18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿ.ಪಿ.2 ಮತ್ತು ನಿ.ಪಿ.3 ರ ದಾಖಲೆ ಗಳನ್ನು ತೋರಿಸಲಾಗಿ ಅವುಗಳಲ್ಲಿ ಕಾಣುವ ತಮ್ಮ ಸಹಿಗಳನ್ನು ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿ.ಪಿ.2(ಬಿ) ಮತ್ತು ನಿ.ಪಿ.3(ಬಿ) ಎಂದು ಗುರುತಿಸಲಾಯಿತು. ನಿ.ಪಿ.2 ಮತ್ತು 3 ದಾಖಲೆಗಳಿಗೆ ನಾನು ದಿನಾಂಕ 29-12-2022 ರಂದು ಡಿಂಬ್ರಿಯಲ್ಲಿನ ಅಶಾ ಭಂಡಾರಿ ರವರಿಗೆ ಸೇರಿದ ತೋಟದ ಬೇಲಿಯ ಒಳಗೆ ಸಹಿ ಮಾಡಿದ್ದೇನೆ. ಹರೀಶ್ ಎನ್ನುವ ಪೊಲೀಸರು ಸ್ಥಳಕ್ಕೆ ಮಹಜರು ಮಾಡುವ ಸಂಬಂಧ ಬಂದಿದ್ದರು. ಆಶಾ ಭಂಡಾರಿ ಮತ್ತು ಅವರ ತಮ್ಮನಿಗೆ ಬೇಲಿಯ ವಿಚಾರಕ್ಕೆ ಹಲ್ಲೆ ಯಾಗಿತ್ತು. ಅಭಿಷೇಕ್ ಎನ್ನುವವರು ಕೂಡಾ ನನ್ನ ಸಂಗಡ ನಿ.ಪಿ.2 ಮತ್ತು 3 ರ ದಾಖಲೆಗಳಿಗೆ ಸಹಿ ಮಾಡಿದ್ದಾರೆ.

ಸಾಕ್ಷಿಗೆ ನಿ.ಪಿ.4 ರ ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಕಾಣುವ ತನ್ನ ಸಹಿಯನ್ನು ಗುರುತಿಸಿದ್ದು ನಿ.ಪಿ.4 ರಲ್ಲಿನ ಸಾಕ್ಷಿಯ ಸಹಿಯನ್ನು ನಿ.ಪಿ.4(ಬಿ) ಎಂದು ಗುರುತಿಸಲಾಯಿತು. ನಿ.ಪಿ.4 ರ ದಾಖಲೆಗೆ ದಿನಾಂಕ 29-12-2022 ರಂದು ಆಶಾ ರವರಿಗೆ ಸೇರಿದ ಅಂಗಳದಲ್ಲಿ ಸಹಿ ಮಾಡಿದ್ದೇನೆ. ಆ ಸಮಯದಲ್ಲಿ ಕೆಂಪು ನೈಟಿಯನ್ನು ಆಶಾ ರವರು ಪೊಲೀಸರಿಗೆ ಕೊಟ್ಟಿದ್ದರು. ನನ್ನ ಸಂಗಡ ಅಭಿಷೇಕ್ ಎನ್ನುವವರು ಕೂಡಾ ನಿ.ಪಿ.4 ಕ್ಕೆ ಸಹಿ ಮಾಡಿದ್ದಾರೆ. ನನ್ನ ಸಮಕ್ಷಮ ಕೊಟ್ಟ ನೈಟಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಿದ ನೈಟಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್.ಹೆಚ್. ವಕೀಲರಿಂದಃ**

ನಿ.ಪಿ.4 ರ ದಾಖಲೆಯನ್ನು ಮಧ್ಯಾಹ್ನ 02.30–03.30 ರ ಅವಧಿಯಲ್ಲಿ ತಯಾರಿಸಲಾಗಿತ್ತು. ನಾನು ಸಹಿ ಮಾಡಿದಾಗ 03.30 ಆಗಿತ್ತು. ತೋಟದಲ್ಲಿ ಮಾಡಿದ ಮಹಜರಿಗೆ ಮಧ್ಯಾಹ್ನ 02.30 ರ ಸಮಯದಲ್ಲಿ ಸಹಿ ಮಾಡಿದ್ದೇನೆ. ತೋಟದಲ್ಲಿ ನಾವು ಮಧ್ಯಾಹ್ನ 01.30–02.30 ಸಮಯದಲ್ಲಿ ಇದ್ದೆವು. ಮಹಜರು ಕಾಲದಲ್ಲಿ ಹಾಜರಿರಬೇಕು ಎಂದು ಪೊಲೀಸರು ನನಗೆ ಲಿಖಿತ ನೋಟೀಸು ಕೊಟ್ಟಿಲ್ಲ. ನಿ.ಪಿ.3 ರ ದಾಖಲೆಯನ್ನು ಮಧ್ಯಾಹ್ನ 02.30ರ ನಂತರ ತಯಾಾರಿಸಲಾಯಿತು. ನಿ.ಪಿ.3 ರ ದಾಖಲೆ ತಯಾರಿಸಲು 15 ನಿಮಿಷ ಆಗಿರುತ್ತದೆ.

ನಿ.ಪಿ.3 ರಲ್ಲಿ ಕಾಣಿಸಿರುವ ಬೇಲಿಯ ಪಶ್ಚಿಮಕ್ಕೆ ಆರೋಪಿ ಅರುಣ್ ರವರ ಜಾಗ ಇರುತ್ತದೆ. ಪೂರ್ವಕ್ಕೆ ದನದ ಕೊಟ್ಟಿಗೆ ಇದೆ. ತಕ್ಷೀರು ನಡೆದಿದೆ ಎನ್ನುವ ಸ್ಥಳದಿಂದ ಸುಮಾರು 100 ಮೀಟರ್ ದೂರದಲ್ಲಿ ಆ ದನದ ಕೊಟ್ಟಿಗೆ ಇದೆ. ಅದರ ಬಗ್ಗೆ ನಕ್ಷೆಯಲ್ಲಿ ತೋರಿಸಿದ್ದಾರೆ ಮತ್ತು ಮಹಜರಿನಲ್ಲಿ ಬರೆದಿದ್ದಾರೆ. ನನ್ನ ಸಮಕ್ಷಮ ಸ್ಥಳದಲ್ಲಿ ಇದ್ದ ಬೇಲಿಯನ್ನು ಅಳತೆ ಮಾಡಿಲ್ಲ. ಸ್ಥಳದಲ್ಲಿದ್ದ ಬೇಲಿ ಪೂರ್ವ ಪಶ್ಚಿಮ ದಿಕ್ಕಿಗೆ ಇರುತ್ತದೆ. ಬೇಲಿ ಸುಮಾರು 8 ಮೀಟರ್ ಎತ್ತರ ಇತ್ತು. ಅದಕ್ಕೆ ಕಲ್ಲಿನ ಕಂಬ ಹಾಕಲಾಗಿದೆ. ಎಷ್ಟು ಕಂಬಗಳು ಎಂದು ಹೇಳಲು ಆಗುವುದಿಲ್ಲ. ಕಂಬಗಳಿಗೆ ತಂತಿಯನ್ನು ಎಳೆಯಲಾಗಿತ್ತು. ಎಷ್ಟು ತಂತಿಗಳನ್ನು ಎಳೆಯಲಾಗಿತ್ತು ಎಂದು ಹೇಳಲಾಗುವುದಿಲ್ಲ.

ತಕ್ಷೀರು ನಡೆದ ಸ್ಥಳದಿಂದ ಚಾ.ಸಾ.1 ರವರ ಮನೆ ಸುಮಾರು 50 ಮೀಟರ್ ದೂರದಲ್ಲಿ ಪೂರ್ವಕ್ಕೆ ಇದೆ. ಸ್ಥಳದಲ್ಲಿ ಪೊಲೀಸರು ಫೋಟೋಗಳನ್ನು ತೆಗೆದಿದ್ದಾರೆ. ಅಲ್ಲಿ ಇಬ್ಬರು ಪೊಲೀಸರು ಇದ್ದರು.

ವಶಪಡಿಸಿಕೊಂಡ ನೈಟಿ ಕೈ ನ ಎಡಭಾಗದಲ್ಲಿ ಹರಿದಿತ್ತು. ಎಷ್ಟು ಉದ್ದ ಹರಿದಿತ್ತು ಎಂದು ಹೇಳಲು ಆಗುವುದಿಲ್ಲ. ಪೊಲೀಸರು ಹರಿದ ಉದ್ದವನ್ನು ನಿ.ಪಿ.4 ರಲ್ಲಿ ಬರೆದಿದ್ದಾರೆ. ನಾನು ಮಹಜರುಗಳನ್ನು ಓದಿ ನೋಡಿದ್ದೇನೆ. ನೈಟಿಯಲ್ಲಿ ಮಣ್ಣಿನ ಕಲೆ ಇತ್ತು. ನೈಟಿಯ ಕೈ ಇರುವ ಭಾಗದಲ್ಲಿ ಮಣ್ಣಿನ ಕಲೆ ಇತ್ತು. ನೈಟಿಯ ಕೈನ ಬಲಭಾಗದಲ್ಲಿ ಹರಿದಿತ್ತು. ಸ್ಥಳದಲ್ಲಿ ಸಿಸಿ ಕ್ಯಾಮಾರಾ ಇತ್ತು. ಎಷ್ಟು ಕ್ಯಾಮಾರಾಗಳು ಇತ್ತು ಎಂದು ಗಮನಿಸಿಲ್ಲ, ಪೊಲೀಸರು ಸಿಸಿ ಕ್ಯಾಮಾರಾಗಳು ಇರುವುದನ್ನು ನೋಡಿದ್ದರು. ಸ್ಥಳದಲ್ಲಿ ಆಶಾ ಭಂಡಾರಿ, ಇಬ್ಬರು ಪೊಲೀಸರು , ನಾನು ಹಾಗೂ ಅಭಿಷೇಕ್ ಇದ್ದೆವು. ನನಗೆ ಆಶಾ ರವರು ನೋಡಿ ಪರಿಚಯ ಇದ್ದಾರೆ.

ನಿ.ಪಿ.2 ಮತ್ತು ನಿ.ಪಿ.4 ಮಹಜರುಗಳನ್ನು ಹಾಗೂ ನಿ.ಪಿ.3 ರ ನಕ್ಷೆಯನ್ನು ಪೊಲೀಸರು ನಡೆದಿದೆ ಎನ್ನುವ ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಚಾ.ಸಾ.1 ರವರು ನನ್ನ ಪರಿಚಯದವರಾದ ಕಾರಣ ಅವರು ನೀಡಿರುವ

ಸುಳ್ಳು ದೂರಿಗೆ ಪೂರಕವಾಗಿ ಪೊಲೀಸರೊಂದಿಗೆ ಶಾಮೀಲಾಗಿ ಮಹಜರುಗಳನ್ನು ತಕ್ಷೀರು ಸ್ಥಳದಲ್ಲಿ ನಡೆಸಿದ್ದಾರೆ ಹಾಗೂ ನಕ್ಷೆಯನ್ನು ತಯಾರಿಸಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.2 ರಿಂದ 4 ರ ಸಂಬಂಧ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ, ಹೇ, ಕೇ, ಸರಿ ಇದೆ.

1ನೇ ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಪುತ್ತೂರು ದ.ಕ.